# ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಸ್ಪೆಷಲ್ ಕೇಸ್** (ಎಸ್.ಸಿ./ಎಸ್.ಟಿ.) **ನಂ.** 30/2024

**ಪಿರ್ಯಾದಿ** – ಸರ್ಕಾರದ ಪರವಾಗಿ **ಹಿರಿಯೂರು ಗ್ರಾಮಾಂತರ ಪೊಲೀಸರು.**

**– ವಿರುದ್ಧ –**

**ಆರೋಪಿ** – 1) **ದುಗ್ಗನಪ್ಪ ಬಿನ್ ಲೇಟ್ ಕೆಂಚಪ್ಪ,**
ವಯಸ್ಸು: 37 ವರ್ಷ, ವ್ಯವಸಾಯ,
2) **ಪರಮೇಶ್ವರಪ್ಪ ಬಿನ್ ದಾಸಪ್ಪ,**
ವಯಸ್ಸು: 20 ವರ್ಷ, ವ್ಯವಸಾಯ
3) **ದಾಸಪ್ಪ ಬಿನ್ ಕೆಂಚಪ್ಪ,**
ವಯಸ್ಸು: 42 ವರ್ಷ, ವ್ಯವಸಾಯ
ಎಲ್ಲರೂ ವಾಸ: ಜುಂಜಪ್ಪನಹಟ್ಟಿ ಗ್ರಾಮ, ಹಿರಿಯೂರು ತಾ. ಚಿತ್ರದುರ್ಗ ಜಿಲ್ಲೆ

## —:: ದೋಷಾರೋಪಣೆ ::—

**ಶ್ರೀ ಗಂಗಾಧರ ಚನ್ನಬಸಪ್ಪ ಹಡಪದ**, ***ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*** *ಚಿತ್ರದುರ್ಗ* ಆದ ನಾನು

**ಆರೋಪಿಗಳಾದ** ನಿಮ್ಮನ್ನು ಈ ಕೆಳಕಂಡ ಆರೋಪಣೆಗೆ ಒಳಪಡಿಸುತ್ತೇನೆ.

ಹಿರಿಯೂರು ತಾಲೂಕು ಕಿಲಾರದಹಳ್ಳಿ ರಿ.ಸ.ನಂ. 1 ಸರಕಾರಿ ಜಮೀನನ್ನು ಚಾಸಾ:1 ರಮೇಶ, ಚಾಸಾ:2 ಈರಪ್ಪರವರು ಉಳುಮೆ ಮಾಡಿಕೊಂಡು ಬಂದಿದ್ದು, ದಿನಾಂಕ 6.7.2024 ರಂದು 3.00 ಗಂಟೆ ಸಮಯದಲ್ಲಿ ಚಾಸಾ:1 ರಿಂದ 3 ಅಂದರೆ ಕ್ರಮವಾಗಿ ರಮೇಶ, ಈರಪ್ಪ, ಭಾರ್ಗವರಾಮ ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ ಆರೋಪಿಗಳಾದ ನೀವು ಅವರು ಉಳುಮೆ ಮಾಡುತ್ತಿದ್ದ ಕಿಲಾರದಹಳ್ಳಿ ಸರ್ವೇ ನಂ. 1 ರ ಜಮೀನಿನಲ್ಲಿ ಅಕ್ರಮವಾಗಿ ಪ್ರವೇಶ ಮಾಡಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ನ್ಯಾಯ ಸಂಹಿತೆ ಕಲಂ 329(3) ಸಹವಾಚಕ ಕಲಂ 3(5)** ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ನಿಮ್ಮ ಸಮಾನವಾದ ಉದ್ದೇಶದಿಂದ ಸದರಿ ಜಮೀನಿನಲ್ಲಿ ಕುರಿಗಳನ್ನು ಬಿಟ್ಟಿದ್ದಕ್ಕೆ ಚಾಸಾ:3 ಭಾರ್ಗವರಾಮನು "ಕುರಿಗಳನ್ನು ನಮ್ಮ ಜಮೀನಿನಲ್ಲಿ ಬಿಡಬೇಡಿ, ಬೆಳೆ ಹಾಳಾಗುತ್ತದೆ" ಎಂದು ಹೇಳಿದ್ದಕ್ಕೆ ಆರೋಪಿಗಳಾದ ನೀವು ನಿಮ್ಮ ಸಮಾನವಾದ ಉದ್ದೇಶದಿಂದ ನಿಮ್ಮ ಪೈಕಿ 1 ನೇ ಆರೋಪಿಯು ಚಾಸಾ:3 ಭಾರ್ಗವರಾಮನಿಗೆ "ವಡ್ಡ ಸೂಳೆಮಗನೇ, ಇದು ನಿನ್ನ ಜಮೀನು ಏನೋ, ಇದು ಸರಕಾರಿ ಜಮೀನು" ಎಂದು ಅವ್ಯಾಚ್ಯವಾಗಿ ಜಾತಿ ಹಿಡಿದು ಬೈದಿದ್ದು, ಜಗಳ ಬಿಡಿಸಲು ಬಂದ ಚಾಸಾ:1 ರಮೇಶ ಮತ್ತು ಚಾಸಾ:2 ಈರಪ್ಪ ಅವರಿಗೆ "ಏನೋ ವಡ್ಡ ಸೂಳೆಮಕ್ಕಳಾ, ನಿಮ್ಮದೇನು ದಾಖಲಾತಿ ಇದ್ದರೆ ತನ್ನಿ, ಬೋಸುಡಿ ಮಕ್ಕಳಾ" ಅಂತಾ ಜಾತಿ ನಿಂದನೆ ಮಾಡಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ನ್ಯಾಯ ಸಂಹಿತೆ ಕಲಂ 352 ಸಹವಾಚಕ ಕಲಂ 3(5) ಮತ್ತು ಎಸ್‌ಸಿ/ಎಸ್‌ಟಿ ದೌಜನ್ಯ ತಡೆ ಕಾಯಿದೆ 3(1)(r)(s)** ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ನಿಮ್ಮ ಸಮಾನವಾದ ಉದ್ದೇಶದಿಂದ ನಿಮ್ಮ ಪೈಕಿ 1 ನೇ ಆರೋಪಿಯು ಚಾಸಾ:3 ಭಾರ್ಗವರಾಮನಿಗೆ ಕೋಲಿನಿಂದ ತಲೆಗೆ ಹೊಡೆದು ರಕ್ತಗಾಯಪಡಿಸಿದ್ದಲ್ಲದೇ, ಸದರಿ ಭಾರ್ಗವರಾಮನ ತೋರು ಬೆರಳಿಗೆ ಕಚ್ಚಿ ರಕ್ತಗಾಯಪಡಿಸಿದ್ದಲ್ಲದೇ, ಚಾಸಾ:2 ಈರಪ್ಪನಿಗೆ ಕೋಲಿನಿಂದ ತಲೆಗೆ, ಸೊಂಟಕ್ಕೆ ಎದೆಗೆ ಹೊಡೆದಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ನ್ಯಾಯ ಸಂಹಿತೆ 118(1) ಸಹವಾಚಕ ಕಲಂ 3(5)** ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ನಿಮ್ಮ ಉದ್ದೇಶದಿಂದ ನಿಮ್ಮ ಪೈಕಿ 3 ನೇ ಆರೋಪಿಯು ಚಾಸಾ:1 ರಮೇಶ, ಚಾಸಾ:2 ಈರಪ್ಪ ಮತ್ತು ಚಾಸಾ:3 ಭಾರ್ಗವರಾಮನಿಗೆ

ಕೈ ಕಾಲುಗಳಿಂದ ಮೈಕೈಗೆ ಹೊಡೆದಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ನ್ಯಾಯ ಸಂಹಿತೆ 115(2) ಸಹವಾಚಕ ಕಲಂ 3(5)** ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನವಾದ ಉದ್ದೇಶದಿಂದ ಸ್ಥಳದಿಂದ ಹೋಗುವಾಗ ಚಾಸಾ:1 ರಿಂದ 3 ರಮೇಶ, ಈರಪ್ಪ, ಭಾರ್ಗವರಾಮನಿಗೆ "ವಡ್ಡ ಸೂಳೆಮಕ್ಕಳಾ, ಇನ್ನೊಮ್ಮೆ ನೀವು ನಮ್ಮ ಕುರಿಗಳನ್ನು ಜಮೀನಿಗೆ ಬಿಡಬೇಡಿ ಎಂದರೆ ನಿಮಗೆ ಜೀವ ಸಹಿತ ಬಿಡುವುದಿಲ್ಲ" ಎಂದು ಪ್ರಾಣ ಬೆದರಿಕೆ ಹಾಕಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ನ್ಯಾಯ ಸಂಹಿತೆ 351(2) ಸಹವಾಚಕ ಕಲಂ 3(5)** ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ.

1, 2, 4 ನೇ ಆರೋಪಿಗಳಾದ ನೀವು ಚಾಸಾ:1 ರಿಂದ 3 ರಮೇಶ, ಈರಪ್ಪ, ಭಾರ್ಗವರಾಮ ಪರಿಶಿಷ್ಟ ಜಾತಿಗೆ ಸೇರಿದವರು ಎಂದು ತಿಳಿದಿದ್ದು ಅವರ ವಿರುದ್ಧ ಮೇಲೆ ಹೇಳಿದ ಅಪರಾಧಿಕ ಕೃತ್ಯಗಳನ್ನು ಎಸಗಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಎಸ್‌ಸಿ/ಎಸ್‌ಟಿ ದೌಜನ್ಯ ತಡೆ ಕಾಯಿದೆ 3(2)(V-a) ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಈ ಮೇಲಿನ ಆಪಾದನೆಗಳಿಗೆ ನಿಮ್ಮ ಮೇಲೆ ವಿಚಾರಣೆ ನಡೆಸಲಾಗುವುದು.

**(ಗಂಗಾಧರ ಚನ್ನಬಸಪ್ಪ ಹಡಪದ)**
ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಚಿತ್ರದುರ್ಗ.

# ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಸ್ಪೆಷಲ್ ಕೇಸ್** (ಎಸ್.ಸಿ./ಎಸ್.ಟಿ.) **ನಂ. 30/2024**

**ಪಿರ್ಯಾದಿ** – ಸರ್ಕಾರದ ಪರವಾಗಿ **ಹಿರಿಯೂರು ಗ್ರಾಮಾಂತರ ಪೊಲೀಸರು**.

**– ವಿರುದ್ಧ –**

**ಆರೋಪಿ** – 1) **ದುಗ್ಗನಪ್ಪ ಬಿನ್ ಲೇಟ್ ಕೆಂಚಪ್ಪ,**
ವಯಸ್ಸು: 35 ವರ್ಷ, ವ್ಯವಸಾಯ,
2) **ಪರಮೇಶ್ವರಪ್ಪ ಬಿನ್ ದಾಸಪ್ಪ,**
ವಯಸ್ಸು: 18 ವರ್ಷ, ವ್ಯವಸಾಯ
3) **ದಾಸಪ್ಪ ಬಿನ್ ಕೆಂಚಪ್ಪ,**
ವಯಸ್ಸು: 40 ವರ್ಷ, ವ್ಯವಸಾಯ
ಎಲ್ಲರೂ ವಾಸ: ಜುಂಜಪ್ಪನಹಟ್ಟಿ ಗ್ರಾಮ, ಹಿರಿಯೂರು ತಾ. ಚಿತ್ರದುರ್ಗ ಜಿಲ್ಲೆ

## —:: ದೋಷಾರೋಪಣೆ ::—

1) ಈಗ ಕನ್ನಡದಲ್ಲಿ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೇ?
ಉತ್ತರಃ

2) ಈಗ ಓದಿ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀಯೇ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ

(ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಅವನಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ವಿವರಿಸಿ ಹೇಳಿಲಾಯಿತು ಹಾಗೂ ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

**(ಗಂಗಾಧರ ಚನ್ನಬಸಪ್ಪ ಹಡಪದ)**
ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.